ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ನಂ:ಮು.ಅ/ದಾವ/ತಾ.ಮ/82/2012-13

ಮುಖ್ಯ ಅಭಿಯಂತರವರ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಲಯ, ಬೆಂಗಳೂರು
ದಿನಾಂಕ:04/03/2013

ತಾಂತ್ರಿಕ ಮಂಜೂರಾತಿ

ಕಾಮಗಾರಿ ಹೆಸರು: Asphalting of road from WIMAX junction to Abbigere in Shettyhalli in Shettyhalli Sub-Division, in Ward no. 12
ಅಂದಾಜು ವೆಚ್ಚ : 50.00 ಲಕ್ಷಗಳು.
ಕಾಮಗಾರಿ ಸಂಕೇತ /ಜಾಬ್ ಕೋಡ್ : 012-13-000024, P-Code: P2201/AC/DW

ಉಲ್ಲೇಖ ಸಂಖ್ಯೆ:
1) ಮಾನ್ಯ ಆಯುಕ್ತರವರ ಬೃ.ಸಾ.ಕಾ.ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ ಸಂಖ್ಯೆ:ಮುಲೆಅ/ಆಯವ್ಯಯ/ಪಿಆರ್/12548/2012-13, ದಿನಾಂಕ: 08-01-2013.
2) ಬೃ.ಸಾ.ಕಾ.ಸ್ಥಾಯಿ ಸಮಿತಿ ದಿನಾಂಕ: 09-01-2013 ರಂದು ನಡೆದ ಸಭೆಯ ನಡವಳಿಗಳ ವಿಷಯ ಸಂಖ್ಯೆ: 178/2012-13 ನಿರ್ಣಯದಂತೆ.
3) ಜಂ.ಆ/ದಾ.ವ/ಆ.ಮ./730/2012-13, ದಿನಾಂಕ: 28-02-2013

****

ಮೇಲಿನ ವಿಷಯದಲ್ಲಿ ತಿಳಿಸಿರುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗದವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಕೋರಿರುವ ಮೇರೆಗೆ, ಉಲ್ಲೇಖ 1ರ ನಿರ್ಣಯದಂತೆ ಜಂಟಿ ಆಯುಕ್ತರು (ದಾಸರಹಳ್ಳಿ ವಲಯ) ರವರು 2ರ ಉಲ್ಲೇಖದನ್ವಯ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 50.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ)ರವರು ಸಲ್ಲಿಸಿರುವ ಅಂದಾಜು ಪಟ್ಟಿಯ ಮೊತ್ತ ರೂ. 50.00 (ರೂ. ಐವತ್ತು ಲಕ್ಷಗಳು ಮಾತ್ರ) ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ ಮತ್ತು ತಾಂತ್ರಿಕ ಮಂಜೂರಾತಿಯ ಪುಸ್ತಕದ ಪುಟ ಸಂಖ್ಯೆ: 46 ಕ್ರಮ ಸಂಖ್ಯೆ: 82 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1. ದರ ಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಬೇಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2. ರಸ್ತೆ ಇತಿಹಾಸ ಪುಸ್ತಕದಲ್ಲಿ ಸದರಿ ಕಾಮಗಾರಿಯಲ್ಲಿನ ವಿವಿಧ ಕೆಲಸಗಳ ವಿವರಗಳನ್ನು ನಮೂದಿಸುವುದು.
3. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಮುಖ್ಯ ಅಭಿಯಂತರರಿಂದ ಅನುಮೋದನೆ ಪಡೆದು ಹಣ ಪಾವತಿಸುವುದು.
4. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಮುಖ್ಯ ಅಭಿಯಂತರರಿಂದ ಅನುಮೋದನೆ ಪಡೆಯುವುದು.

ಮುಖ್ಯ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಲಯ, ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:-
1. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ ಬೆಂಗಳೂರು. ಮೂಲ ಅಂದಾಜು ಪಟ್ಟಿಯೊಂದಿಗೆ ಮುಂದಿನ ಕ್ರಮಕ್ಕಾಗಿ.
2. ಸಹಾಯಕ ಹಣಕಾಸು ನಿಯಂತ್ರಕರು, ದಾಸರಹಳ್ಳಿ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಕಛೇರಿ ಪ್ರತಿ.

Chief Engineer, Dasarahalli Zone, Bangalore